**ದಿನಾಂಕ 22-03-2011 ರಂದು ಮಧ್ಯಾಹ್ನ 3:30 ಘಂಟೆಗೆ ರಾಜ್ಯದ ಮುಖ್ಯ ಮಾಹಿತಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಾಹಿತಿ ಆಯುಕ್ತರುಗಳ ಸಭೆಯ ನಡವಳಿಗಳು**

**ಈ ಸಭೆಯಲ್ಲಿ ಉಪಸ್ಥಿತರಿದ್ದ ಆಯುಕ್ತರುಗಳು/ಅಧಿಕಾರಿಗಳು:**

1) ಶ್ರೀ ಎ.ಕೆ.ಎಂ. ನಾಯಕ್, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು.
2) ಡಾ: ಹೆಚ್.ಎನ್. ಕೃಷ್ಣ, ರಾಜ್ಯ ಮಾಹಿತಿ ಆಯುಕ್ತರು.
3) ಶ್ರೀ ಜೆ.ಎಸ್.ವಿರೂಪಾಕ್ಷಯ್ಯ, ರಾಜ್ಯ ಮಾಹಿತಿ ಆಯುಕ್ತರು.
4) ಶ್ರೀ ಡಿ. ತಂಗರಾಜ್, ರಾಜ್ಯ ಮಾಹಿತಿ ಆಯುಕ್ತರು.
5) ಶ್ರೀ ಎಂ.ಆರ್.ಪೂಜಾರ್, ರಾಜ್ಯ ಮಾಹಿತಿ ಆಯುಕ್ತರು.
6) ಶ್ರೀ ಟಿ. ರಾಮ ನಾಯ್ಕ್, ರಾಜ್ಯ ಮಾಹಿತಿ ಆಯುಕ್ತರು.
7) ಡಾ: ಶೇಖರ್ ಡಿ. ಸಜ್ಜನರ್, ರಾಜ್ಯ ಮಾಹಿತಿ ಆಯುಕ್ತರು.
8) ಶ್ರೀ ಬಿ.ಎ. ನಾಗೇಶ್, ಕಾರ್ಯದರ್ಶಿಗಳು.
9) ಶ್ರೀ ಬಿ. ಶ್ರೀರಾಮ ರೆಡ್ಡಿ, ಕಾನೂನು ಅಧಿಕಾರಿಗಳು.
10) ಶ್ರೀ ಟಿ. ಅಶೋಕ, ಅಧೀನ ಕಾರ್ಯದರ್ಶಿ.
11) ಶ್ರೀ ಹೆಚ್. ಅನಂತ ಕುಮಾರ್, ಶಾಖಾಧಿಕಾರಿ.

**ವಿಷಯ-1** ಜಿಲ್ಲಾವಾರು ಪ್ರಕರಣಗಳ ಹಂಚಿಕೆ ಬಗ್ಗೆ.

ವಿವರವಾದ ಚರ್ಚೆಯ ನಂತರ ಹಾಲಿ ಇರುವ ಪದ್ಧತಿಯನ್ನು ಮುಂದುವರಿಸಲು ತೀರ್ಮಾನಿಸಲಾಯಿತು. ಜಿಲ್ಲಾವಾರು ಬಾಕಿ ಇರುವ ಪ್ರಕರಣಗಳನ್ನು ಪರಿಶೀಲಿಸಿ ಹೆಚ್ಚಿನ ಸಂಖ್ಯೆಯಲ್ಲಿರುವ ಪ್ರಕರಣಗಳನ್ನು ವಿಲೇವಾರಿ ಮಾಡಲು 2-3 ರಾಜ್ಯ ಮಾಹಿತಿ ಆಯುಕ್ತರು ಅಂತಹ ಜಿಲ್ಲೆಗಳಲ್ಲಿ ಪ್ರವಾಸ ಮಾಡಲು ನಿರ್ಧರಿಸಲಾಯಿತು.

**ವಿಷಯ-2** ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಇಲಾಖಾವಾರು ಬಾಕಿ ಇರುವ ಪ್ರಕರಣಗಳ ಬಗ್ಗೆ.

ವಿವರವಾದ ಚರ್ಚೆಯ ನಂತರ ಪ್ರಕರಣಗಳ ವಿಚಾರಣೆಯನ್ನು ಅರ್ಜಿಯ ಹಿರಿಯತನದ ಆಧಾರದ ಮೇಲೆ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಂಬಂಧಿಸಿದಂತೆ ಅರ್ಜಿಯ ಪ್ರತಿಯನ್ನು ಆರ್.ಟಿ.ಐ. ಕೋಶಕ್ಕೂ ಸಹ ಕಳುಹಿಸಲು ನಿರ್ಧರಿಸಲಾಯಿತು.

ಹಿಂದಿನ ಸಭೆಯಲ್ಲಿ ನಿರ್ಧರಿಸಿದಂತೆ ಬಾಕಿ ಇರುವ 14,000/- ಪ್ರಕರಣಗಳ ವಿಲೇವಾರಿಗೆ ಸಂಬಂಧಿಸಿದಂತೆ ಪ್ರತಿ ಆಯುಕ್ತರುಗಳಿಗೆ 2,000/- ಪ್ರಕರಣಗಳನ್ನು ಆಯ್ಕೆ ಮಾಡಿಕೊಂಡು, ಕಾನೂನು ಅಧಿಕಾರಿಯವರು ಸೂಚಿಸುವ ನಮೂನೆಯೊಂದಿಗೆ ಅರ್ಜಿಯನ್ನು ಪ್ರತಿವಾದಿಗಳಿಗೆ ಕಳುಹಿಸಿ 30 ದಿನಗೊಳಗಾಗಿ ಮಾಹಿತಿಯನ್ನು ಸಲ್ಲಿಸುವಂತೆ ತಿಳಿಸುವುದು ಮತ್ತು ಈ ಕಾರ್ಯವನ್ನು ಹೊರ ಗುತ್ತಿಗೆ ಆಧಾರದ ಮೇಲೆ ನಿರ್ವಹಿಸಲು ಕಿಯೋನಿಕ್ಸ್ ಸಂಸ್ಥೆಗೆ ವಹಿಸುವಂತೆ ನಿರ್ಧರಿಸಲಾಯಿತು.

**ವಿಷಯ–3** ಕರ್ನಾಟಕ ಮಾಹಿತಿ ಆಯೋಗಕ್ಕೆ ಲೆಕ್ಕಾಧಿಕಾರಿ/ಲೆಕ್ಕ ಪರಿಶೋಧನಕಾರಿ ಹುದ್ದೆ ಸೃಷ್ಠಿಸುವ ಬಗ್ಗೆ.

ಸದರಿ ವಿಷಯವನ್ನು ಚರ್ಚಿಸಿ ಆಯೋಗದಲ್ಲಿ ಲೆಕ್ಕ ಶಾಖೆಗೆ ಸಂಬಂಧಿಸಿದಂತೆ ಕೆಲಸಗಳು ಹೆಚ್ಚುತ್ತಿರುವುದರಿಂದ ಒಂದು ವರ್ಷದ ಅವಧಿಗೆ ಒಂದು ಲೆಕ್ಕಾಧಿಕಾರಿ/ಲೆಕ್ಕ ಪರಿಶೋಧನಕಾರಿ ಹುದ್ದೆಯನ್ನು ಸೃಷ್ಠಿಸಲು ತೀರ್ಮಾನಿಸಲಾಯಿತು ಮತ್ತು ಈ ಹುದ್ದೆಯನ್ನು ರಾಜ್ಯ ಲೆಕ್ಕಪತ್ರ ಇಲಾಖೆ/ಖಜಾನೆ ಇಲಾಖೆಯಿಂದ ಪಡೆಯಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ತೀರ್ಮಾನಿಸಲಾಯಿತು.

**ವಿಷಯ–4** ಇತರೆ ವಿಷಯಗಳು.

1. ಜಿಲ್ಲಾ ಪ್ರವಾಸದಲ್ಲಿ ಹೊರ ಗುತ್ತಿಗೆ ಸಿಬ್ಬಂದಿ ಪಾಲ್ಗೊಳ್ಳುತ್ತಿರುವುದು ತೀರ್ಪು ಬರಹಗಾರರ/ಶೀಘ್ರಲಿಪಿಗಾರರಿಗೆ ಗ್ರೂಪ್ 'ಸಿ' ನೌಕರರಿಗೆ ನೀಡುತ್ತಿರುವ ಟಿ.ಎ./ಡಿ.ಎ. ಮಂಜೂರು ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಲಾಯಿತು.
2. ಇ–ಆಡಳಿತ ಇಲಾಖೆ ವತಿಯಿಂದ ಪಡೆದಿರುವ ಗಣಕಯಂತ್ರ ಮತ್ತು ಲ್ಯಾಪ್‌ಟಾಪ್‌ಗಳ ವಿತರಣೆಯನ್ನು ನಿಗಧಿತ ಪ್ರಸ್ತಾವನೆಯಂತೆ ವಿತರಿಸಲು ತೀರ್ಮಾನಿಸಲಾಯಿತು. ತೀರ್ಪುಬರಹಗಾರರಿಗೆ ಈಗಾಗಲೇ ನೀಡಿರುವ ಲ್ಯಾಪ್‌ಟಾಪ್‌ಗಳನ್ನು ಕಛೇರಿ ವೇಳೆ/ಜಿಲ್ಲಾ ಪ್ರವಾಸದಲ್ಲಿ ಮಾತ್ರ ಉಪಯೋಗಿಸಲು ನಿರ್ಧರಿಸಲಾಯಿತು.

(ಎ.ಕೆ.ಎಂ. ನಾಯಕ್)
ರಾಜ್ಯ ಮುಖ್ಯ ಮಾಹಿತಿ ಆಯುಕ್ತರು

(ಡಾ: ಹೆಚ್.ಎನ್. ಕೃಷ್ಣ)
ರಾಜ್ಯ ಮಾಹಿತಿ ಆಯುಕ್ತರು

(ಜೆ.ಎಸ್.ವಿರೂಪಾಕ್ಷಯ್ಯ)
ರಾಜ್ಯ ಮಾಹಿತಿ ಆಯುಕ್ತರು

(ಡಿ. ತಂಗರಾಜ್)
ರಾಜ್ಯ ಮಾಹಿತಿ ಆಯುಕ್ತರು

(ಎಂ.ಆರ್.ಪೂಜಾರ್)
ರಾಜ್ಯ ಮಾಹಿತಿ ಆಯುಕ್ತರು

(ಟಿ. ರಾಮ ನಾಯ್ಕ್)
ರಾಜ್ಯ ಮಾಹಿತಿ ಆಯುಕ್ತರು

(ಡಾ: ಶೇಖರ್ ಡಿ. ಸಜ್ಜನರ್)
ರಾಜ್ಯ ಮಾಹಿತಿ ಆಯುಕ್ತರು